# ಅಧ್ಯಯನ – 5 Study - V

# 'ಸುಗ್ಗಿಯ ಕಾಲ'

## The Time of Harvest

**ಸುಗ್ಗಿಯ ಕಾಲಾನುಕ್ರಮವಾದ ಸ್ಥಳ – ಅದರ ಉದ್ದೇಶ ಮತ್ತು ಮಹಾಪ್ರಾಧ್ಯಾನತೆ – ಕಾಲ ಪ್ರವಾದನೆಗಳ ತೇಜಕೇಂದ್ರ. ಸಬ್ಬತ್ತಿಗಾಗಿ ಸಿದ್ಧತೆಗಳು – ಪ್ರವಾದನೀಯ ಸಾಕ್ಷ್ಯದ ಒಗ್ಗೂಡಿಸುವಿಕೆಯ ಮಹತ್ವ – ಕರ್ತನ ಪ್ರತ್ಯಕ್ಷತೆ – ಸಮಂಜಸವಾದ ಆಕ್ಷೇಪಣೆಗಳಿಗೆ ಉತ್ತರಿಸಲಾಗಿದೆ – ನಮ್ಮ ಕರ್ತನ ಸಂತೋಷ ಪ್ರವೇಶ.**

**"ಸುಗ್ಗೀಕಾಲ ಅಂದರೆ ಯುಗದ ಸಮಾಪ್ತಿ" (ಮತ್ತಾಯ 13:39)**

ಶ್ರದ್ಧೆಯುಳ್ಳ ವಿದ್ಯಾರ್ಥಿಯು "ಯುಗದ ಸಮಾಪ್ತಿ" ಎಂದು ನಿಶ್ಚಯಿಸಿರುವಂತಹ ಕಾಲವನ್ನು ಸೂಕ್ತವಾಗಿ ಹೆಸರಿಸಲಾಗಿದೆಯೋ ಎಂಬುದನ್ನು ಗಮನಿಸಿರುತ್ತಾನೆ. ಯಾಕೆಂದರೆ ಅದರಲ್ಲಿ ಸುವಾರ್ತಾ ಯುಗವು ಮುಕ್ತಾಯಗೊಳ್ಳುವುದು ಮಾತ್ರವಲ್ಲ, ಆದರೆ, ಈ ಯುಗದ ಕೊನೆಗಾಣುವಿಕೆಗೆ ಸಂಬಂಧಿಸಿದ ಎಲ್ಲಾ ಪ್ರವಾದನೆಗಳೂ ಅವುಗಳ ಕೈಗೂಡಿಸುವಿಕೆಗಳನ್ನು ತಲುಪುತ್ತವೆ. ಅದೇ ವರ್ಗದ ಓದುಗರು ಆ 115 ವರ್ಷಗಳ ಕಡೆಯ 40 ವರ್ಷಗಳನ್ನು (1874–1914) 'ಅಂತ್ಯಕಾಲ' ಅಥವಾ 'ಸುಗ್ಗಿಯ ಕಾಲ' ಎಂದು ಕರೆಯುತ್ತಾರೆಂಬುದನ್ನು ಗಮನಿಸಿರುತ್ತಾರೆ.

ಈ ಸಂಕ್ಷಿಪ್ತ ಅವಧಿಯು ಸಮಗ್ರ ಯುಗದಲ್ಲಿನ ಅನೇಕ ಮಹತ್ವದ ಘಟನೆಗಳುಳ್ಳ ಕಾಲವಾಗಿದೆ. ಯಾಕೆಂದರೆ, ಅದರಲ್ಲಿ ಯುಗದ ಎಲ್ಲಾ ಫಲಗಳನ್ನು ಶೇಖರಿಸಿಕೊಳ್ಳಬೇಕು ಮತ್ತು ಅವುಗಳ ನಿರ್ವಹಣೆ ಮಾಡಬೇಕು ಮತ್ತು ಅದರ ಹೊಲ ಅಂದರೆ ಈ ಲೋಕ (ಮತ್ತಾಯ 13:38)ವನ್ನು ಸ್ವಚ್ಛಗೊಳಿಸಬೇಕು. ಉಳಬೇಕು, ಅದನ್ನು ಬೇರೊಂದು ಬಿತ್ತನೆಗೆ ಸಿದ್ಧಪಡಿಸಬೇಕು ಮತ್ತು ಅದರ ಕೊಯ್ಲಿನ ಕಾಲ ಹೀಗೆ ಇದು ಸಹಸ್ರಮಾನ ಯುಗವಾಗಿದೆ. ಈ ಸುಗ್ಗಿ ಕಾಲದ ಅತಿ ಮಹತ್ವದ ಘಟನೆಗಳು ಅತಿ ವಿರಳವಾಗಿ ಅಂದಾಜಿಸ ಲಾಗಿದೆ. ಆದಾಗ್ಯೂ ಅಂಗೀಕೃತವಲ್ಲದ ಪಾರುಪತ್ಯಗಳು ತಮಗೆ ನೇಮಕವಾದ ಕಾರ್ಯವನ್ನು ನೆರವೇರಿಸುವವ ರಾದರೂ ಅದರ ಪ್ರಾಬಲ್ಯವು ಈ ಲೋಕದವರಿಗೆ ಅರಿವಿಲ್ಲ. ನಿಜವಾಗಿಯೂ, ಇದು ಕ್ರೈಸ್ತ ಸಭೆಯ ಸುಗ್ಗಿಯೇ ಹೊರತು ಸಮಸ್ತ ಲೋಕದ ಸುಗ್ಗಿ ಅಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಒಳ್ಳೆಯದು; ಅದು ಮಹಮದ್ದೀಯರ ಮೇಲಾಗಲೀ, ಬ್ರಾಹ್ಮಣರ ಮೇಲಾಗಲೀ, ಬೌದ್ಧ ಮತ್ತು ಇನ್ನಿತರ ಯಾವ ಧರ್ಮದವರ ಮೇಲಾಗಲೀ ಯಾವುದೇ ಪರಿಣಾಮವನ್ನು ಬೀರುವುದಿಲ್ಲ. ಆದರೆ ಕೇವಲ ನಿಜವಾದ ಕ್ರೈಸ್ತ ಸಭೆಯ ಮೇಲೆ ಮಾತ್ರ. ಹೀಗಾಗಿ ಹೆಚ್ಚು ಕಡಿಮೆ ಅದರೊಂದಿಗೆ, ಕ್ರೈಸ್ತ ಸಾಮ್ರಾಜ್ಯದೊಂದಿಗೆ ಸಂಯೋಜಿತವಾಗಿದೆ.

ಆದರೆ, ಪ್ರಪಂಚದವರು ಈ ಸಮಗ್ರ ಅವಧಿಯಲ್ಲಿ ಸುಗ್ಗಿಯ ಗುಣಲಕ್ಷಣಗಳ ಬಗ್ಗೆ ಸಂಪೂರ್ಣವಾಗಿ ಅರಿವಿಲ್ಲದೇ ಇರುವಾಗಲೂ, ಅದರ ಅಪರೂಪವಾದ ಸಂಗತಿಗಳ ಪರಿಣಾಮವನ್ನು ಕುರಿತು ಭಯದಿಂದಲೂ ಭೀತಿಯಿಂದಲೂ ಕೂಡಿದವರಾಗಿದ್ದಾರೆ (ಯೆಶಾಯ 28:21), ಈಗ ಜೀವಿಸುತ್ತಿರುವ, ಪ್ರತಿಷ್ಠೆಗೊಂಡ ಅನುಯಾಯಿಗಳುಳ್ಳ ಕರ್ತನ ಚಿಕ್ಕಹಿಂಡು ಹೆಚ್ಚಿನ ಜ್ಞಾನೋದಯದ ಸಂತೋಷವನ್ನು ಅವರ ಪೂರ್ವಸೂಚಕರಿಗೆ ಯಾವಾಗಲೂ ಇರದಿದ್ದ ಸೌಕರ್ಯಕ್ಕಿಂತ ಹೆಚ್ಚಾಗಿ ಅನುಭವಿಸುತ್ತಾರೆ. ಈ ಅವಧಿಯಲ್ಲಿ ಪ್ರವಾದನಾ ಸಾಕ್ಷ್ಯಗಳ ಎಲ್ಲಾ ಕಿರಣಗಳೂ ಒಂದು ಭವ್ಯವಾದ ತೇಜಕೇಂದ್ರವನ್ನು ತಲುಪಿ ವಿಶ್ವಾಸಿಗಳ ಕಣ್ಣಲ್ಲಿ ದೇವರ ಯೋಜನೆಯನ್ನು ಅದರ ಅಭಿವೃದ್ಧಿ, ಹಿಂದಿನ, ಇಂದಿನ ಮತ್ತು ಮುಂದಿನ ಭವಿಷ್ಯಗಳೊಂದಿಗೆ ಪ್ರಕಾಶಮಾನವಾಗಿ ಹೊಳೆಯುತ್ತವೆ.

ಅಂತ್ಯಕಾಲದ ಆರಂಭ (ಕ್ರಿ.ಶ. 1799) ದಿಂದಲೂ, ದೇವರು ತನ್ನ ಪ್ರತಿಷ್ಠಿತ 'ಪವಿತ್ರ ಜನರನ್ನು', ಆತನ 'ಪವಿತ್ರಾಲಯ'ವನ್ನು, "Sanctuary" ಈ ನಾಲ್ವತ್ತು ವರ್ಷಗಳಲ್ಲಿ ಆತನು ಉದ್ದೇಶಿಸಿರುವ ಸುಗ್ಗಿಯ ಮಹಾ ಆಶೀರ್ವಾದಗಳನ್ನು ಸುರಿಸುವಂತೆ ಸಿದ್ಧಪಡಿಸುತ್ತಾ ಇದ್ದಾನೆ: ಈ ಆಶೀರ್ವಾದಗಳು ಅವರನ್ನು ಕ್ರಿಸ್ತನೊಂದಿಗೆ ಆತನ ವಧುವಾಗಿ, ಆತನೊಂದಿಗೆ ಪೂರ್ಣ ಸಂತೋಷದೊಡನೆ, ಜೊತೆ ಬಾಧ್ಯಸ್ಥರನ್ನಾಗಿ ಸಿದ್ಧತೆಮಾಡುವ ಉದ್ದೇಶವನ್ನೂ ಹೊಂದಿದೆ. "ಗೊತ್ತು ಪಡಿಸಿದ ಕಾಲ" (Time appointed) ಎಂಬುವುದರಿಂದ ಆಯ್ದು ತೆಗೆದಂತೆ – 1260 ದಿನಗಳ ಅಂತ್ಯವಾದ ಕ್ರಿ.ಶ. 1799 ರಲ್ಲಿ ಸಭೆಯ ಮಹಾಪೀಡಕನಾದ ಅಧರ್ಮ – ಸ್ವರೂಪನ ಶಕ್ತಿಯು ಮುರಿಯಲ್ಪಟ್ಟಿತು ಮತ್ತು ಆತನ

ರಾಜ್ಯವನ್ನು ತೆಗೆದುಕೊಳ್ಳಲಾಯಿತು. ತನ್ನ ಬಲವಾದ ಕೈಗಳ ಒಂದೇ ಪೆಟ್ಟಿನಿಂದ ದೇವರು ಅಲ್ಲಿ ಚಿಯೋನಿನ ನಿರ್ಬಂಧಗಳನ್ನು ತೊಡೆದುಹಾಕಿದನು ಮತ್ತು ಪೀಡಿತರನ್ನು ಮುಕ್ತರನ್ನಾಗಿ ಮಾಡಿದನು. ಮತ್ತು "ಪವಿತ್ರಾಲಯ" ವರ್ಗದವರು, "ಪವಿತ್ರ ಜನರು", ಬಲಹೀನರು, ತಡೆಹಿಡಿಯಲ್ಪಟ್ಟವರು, ಕುಂಟರು, ಬಹುಮಟ್ಟಿಗೆ ಬೆತ್ತಲೆಯಾದವರು ಮತ್ತು ಕುರುಡರು, ಅಂಧಕಾರದ ಬಂಧೀಖಾನೆಯಲ್ಲಿದ್ದವರು, ಪೋಪನ ಬಂಧನದಲ್ಲಿ ಮಲೀನಗೊಂಡವರು, ದುಃಖಾವಸ್ಥೆಯಲ್ಲಿದ್ದ ಬಡ ಆತ್ಮಗಳು ! ಮುಂದೆ ಬಂದರು, ಬರುತ್ತಲೇ ಇದ್ದಾರೆ. ತೊಂದರೆಗಳೆಂಬ ಭೀಕರ ಬೆಂಕಿ ಜ್ವಾಲೆಗಳ ಮಧ್ಯದಲ್ಲಿಯೂ ಕಷ್ಟಪಡುತ್ತಾ ದೇವರ ಸೇವೆ ಮಾಡಲು ನಿಷ್ಠಾವಂತಿಕೆಯಿಂದ ಪ್ರಯತ್ನಿಸುತ್ತಾ ಇದ್ದಾರೆ, ಬಹಳ ಮಟ್ಟಿಗೆ ಉಳಿದೆಲ್ಲಾ ಸತ್ಯವು ಉಡುಗಿ ಹೋದಾಗಲೂ ಇವರು ಕ್ರಿಸ್ತನ ಶಿಲುಬೆಗೆ ನೇತುಕೊಂಡಿದ್ದಾರೆ ಮತ್ತು ಧೈರ್ಯದಿಂದ ಇದುವರೆಗೆ ಬಂಧಿಸಲ್ಪಟ್ಟಿದ್ದ ಹಳೆ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಗಳೆಂಬ ದೇವರ "ಎರಡು ಸಾಕ್ಷಿಗಳನ್ನು" ಮುಕ್ತಿಗೊಳಿಸಲು ಹೆಣಗುತ್ತಿದ್ದಾರೆ, ಅವುಗಳು ಇದುವರೆಗೆ ಬಳಕೆಯಲ್ಲಿಲ್ಲದ ಭಾಷೆ (ಮೃತ ಭಾಷೆಗಳು) ಎಂಬ ಗೋಣಿತಟ್ಟನ್ನು ಹೊದ್ದುಕೊಂಡು ಪ್ರವಾದಿಸುತ್ತಿದ್ದವು (ಪ್ರಕಟನೆ 11:3).

ದೇವರು ತನ್ನ ಜ್ಞಾನದಲ್ಲಿ ಈಗ ಸಂತರುಗಳಿಗೆ ದಯಪಾಲಿಸಿರುವ ದೀವಟಿಗೆಯ ಪ್ರವಾಹದಿಂದ ಅವರನ್ನು ವಶಪಡಿಸಿಕೊಳ್ಳಲಿಲ್ಲ. ನಯವಾಗಿ ಅವರನ್ನೆಲ್ಲಾ ಹಂತ ಹಂತವಾಗಿ ನಡೆಸಿದನು, ಮೊದಲು ಅವರನ್ನು ಇನ್ನೂ ಅಂಟಿಕೊಂಡಿದ್ದ ಪೋಪನ ಮಾಲಿನ್ಯದಿಂದ ಶುದ್ಧೀಕರಿಸಿದನು. ಈ ರೀತಿಯಲ್ಲಿ ದೇವರು ಅವರನ್ನು ಸೆಳೆದನು, ಪವಿತ್ರಾಲಯದ ವರ್ಗವು ತಪ್ಪುಗಳನ್ನು ಬಹಿರಂಗಪಡಿಸಿದ ಒಳ್ಳೇ ಕುರುಬನ ಸತ್ಯದ ಸ್ವರಭಾರವನ್ನು ಗ್ರಹಿಸಿ ಆತನನ್ನು 1846ರ ತನಕ ಅನುಸರಿಸಿತು. ಇದನ್ನು ಪ್ರವಾದನೆಯು ಪವಿತ್ರ ಜನರ, ಪವಿತ್ರಾಲಯದ ತೇಜಕೇಂದ್ರವು ಪೋಪನ ಅಧಿಕಾರದಿಂದ ಮುಕ್ತಿಗೊಳ್ಳುತ್ತದೆ, ಎಲ್ಲಾ ಮೈಲಿಗೆಯೂ ಶುದ್ಧೀಕರಿಸಲ್ಪಡುತ್ತದೆ ಮತ್ತು ಮಾನವನ ಅಶುದ್ಧ ಸಿದ್ಧಾಂತಗಳ ಬದಲಾಗಿ ಕರ್ತನೂ ಮತ್ತು ಅಪೋಸ್ತಲರೂ ಸಭೆಕಟ್ಟಿದ ಸತ್ಯದ ಸುಂದರ ತತ್ವವಿಧಿಗಳು ಅವನ್ನು ಸ್ಥಳಾಂತರಗೊಳಿಸುವಂತೆ ಸಿದ್ಧಪಡಿಸುತ್ತದೆ ಎಂಬುದಾಗಿ ಗುರುತಿಸಿದ್ದನು. ಕ್ರಮೇಣವಾಗಿ, ಅವರುಗಳು ಕರ್ತನು ತಾನೇ ಬರುವ ಸುಗ್ಗಿಯ ಕಾಲದಲ್ಲಿ ಅತ್ಯುನ್ನತ ಸ್ಥಿತಿಗೆ ನಡೆಸಲ್ಪಡುವರು ಎಂದು ನಿರೀಕ್ಷಿಸಬಹುದು. ದೇವರ ವಾಕ್ಯದ ಅವರ ಪರಿಶ್ರಮಶೀಲ ಅಧ್ಯಯನವೂ ಮತ್ತು ಅದನ್ನು ದೇವದೂತರುಗಳೂ ಲಕ್ಷವಿಟ್ಟು ನೋಡಬೇಕೆಂದು ಅಪೇಕ್ಷಿಸಿದ್ದನ್ನು (1 ಪೇತ್ರ 1:12) ತಿಳುಕೊಳ್ಳುವ ಅವರ ಶ್ಲಾಘನೀಯ ಬಯಕೆಯು ಸಂಪೂರ್ಣವಾಗಿ ಅನುಮತಿಸಲ್ಪಡದಿದ್ದರೂ, ಹೆಚ್ಚಾಗಿ ಆಶೀರ್ವದಿಸಲ್ಪಟ್ಟವು.

ಸತ್ಯದ ವಾಕ್ಯದಲ್ಲಿ ಬೋಧಿಸಲ್ಪಟ್ಟ ಉತ್ಸಾಹದಲ್ಲಿ ತುಂಬಿರುವ, ಶುದ್ಧೀಕರಿಸಲ್ಪಟ್ಟಿರುವ, ಮಿಗಿಲಾಗಿ ಈ ಲೋಕದಿಂದ ತಮ್ಮನ್ನು ಪ್ರತ್ಯೇಕಿಸಿಕೊಂಡು, ಗರ್ವದಿಂದ ಮನಶುದ್ಧಿಯಾದವರನ್ನು, 1844 ರ ನಿರಾಶೆಯಿಂದ ಶಿಸ್ತಿಗೊಳಗಾದ, ಕೆಲವು ನಂಬಿಗಸ್ಥರನ್ನು ಈ ರೀತಿಯಲ್ಲಿ ಹೆಚ್ಚಾಗಿ ಕರ್ತನ ವಿನಯಶೀಲ ಅವಲಂಬನೆಗೆ ಬರುವಂತೆ ಆದೇಶಿಸಲಾಯಿತು. ಮುಂತಿಳಿಸಿದಂತೆ ಮೂವತ್ತು ವರ್ಷಕಾಲದ ವಿಳಂಬಿಸುವಿಕೆಯು ಈ ಪವಿತ್ರರಲ್ಲಿ ತಾಳ್ಮೆ, ನಮ್ರತೆ ಮತ್ತು ಪ್ರೀತಿಕರ ಅಧೀನತೆಯನ್ನು ವರ್ಧಿಸಿತು, 1335 ದಿನಗಳ (1874ರ ಸುಗ್ಗಿ ಕಾಲದ) ಅಂತ್ಯದವರೆಗೆ ಕಾವಲುಗಾರರನ್ನು "Watchers" ಸ್ವೀಕರಿಸಿದ ನಂತರ ಎಲ್ಲಾ ಪವಿತ್ರಾಲಯ ವರ್ಗದವರಿಗೆ 'ಇಗೋ! ಮದಲಿಂಗನು' ಎಂಬ ಸಂತೋಷದ ವಾರ್ತೆಯನ್ನು ಪ್ರಕಟಿಸುವಂತೆ ಕಳುಹಿಸಲಾಯಿತು. ಇದನ್ನು ಕೇಳಿಸಿಕೊಂಡ ವರ್ಗದ ಎಲ್ಲರೂ ಈ ಸಂದೇಶದ ಪ್ರಾಮುಖ್ಯತೆಯನ್ನು ಗ್ರಹಿಸುವಾಗ, ಅವರ ಸ್ವರವನ್ನೂ ಎತ್ತಿ "ಇಗೋ! ಮದಲಿಂಗನು" ಎಂದು ಹೇಳಿದರು. ಸಂತರುಗಳಿಗೆ ಈ ಸುಗ್ಗಿಯ ಸಂದೇಶವು ಪ್ರತಿಷ್ಠೆಗೊಂಡವರಿಗೆ ಮತ್ತು ನಿಷ್ಠಾವಂತರಿಗೆ ತಲಪುವ ತನಕ ಮುಂದುವರೆಯುವುದು. ಈ ಸಂದೇಶವು ಈಗ ಈ ಲೋಕಕ್ಕಾಗಿ ಅಲ್ಲ, ಆದರೆ ಇದು ಕೇವಲ ಕ್ರಿಸ್ತನ ಭಾವೀ ಮದಲಗಿತ್ತಿಗೆ ಮಾತ್ರ. ನಮ್ಮ ಕರ್ತನು ಬೇರೆ ಯಾವ ವರ್ಗದವರಿಗೂ ಮದಲಿಂಗನಲ್ಲ. ಆತನ ಪ್ರತ್ಯಕ್ಷತೆಯ ತಿಳುವಳಿಕೆಯು ಈ ಪ್ರಪಂಚದವರಿಗೆ ಮತ್ತೊಂದು ಸಮಯದಲ್ಲಿ, ಬೇರೆ ರೀತಿಯಲ್ಲಿ ಉಂಟಾಗುತ್ತದೆ. ಪವಿತ್ರಾಲಯ ವರ್ಗದವರಾದ, ಪ್ರತಿಷ್ಠೆಗೊಂಡವರ ಹೊರತಾಗಿ ಬೇರೆ ಯಾರೂ ಈ ಸತ್ಯವನ್ನು ಸ್ವೀಕರಿಸಲು ಈಗ ಸಿದ್ಧರಿಲ್ಲ. ಹೆಸರುಮಾತ್ರದ ಕ್ರೈಸ್ತ ಸಮೂಹದವರಿಗೆ (ನಾಮಾಂಕಿತ ಕ್ರೈಸ್ತರು) ಮತ್ತು ಈ ಲೋಕದವರಿಗೆ ಸಹಾ ಅದು ವಿವೇಕಶೂನ್ಯವಾಗಿದೆ; ಅವರು ಈ ಸರಣಿಯ ಸಂಪುಟಗಳಲ್ಲಿ ಮುಂದಿಟ್ಟಿರುವ ಪುರಾವೆಗಳನ್ನು ಪರೀಕ್ಷಿಸುವುದಕ್ಕೆ ಒಲವು ತೋರುವುದೂ ಇಲ್ಲ.

ದೇವರು ಈ ರೀತಿಯಾಗಿ ಆತನ ಜನರನ್ನು ಸಿದ್ಧಪಡಿಸಿ ಅವರನ್ನು ಅವರು ತಿಳಿಯದಿದ್ದ ಮಾರ್ಗದಲ್ಲಿ

ನಡೆಸಿದನಲ್ಲದೆ, ಈ ಅಗತ್ಯವಾದ ವಿಶೇಷ ಸಮಯಕ್ಕಾಗಿ, ಆತನು ಸತ್ಯವೇದಾಧ್ಯಯನಕ್ಕಾಗಿ ಅನುಕ್ರಮಣಿಕೆ (Concordance), ಪರಿಶುದ್ಧ ಗ್ರಂಥಗಳ ವಿವಿಧವಾದ ಮತ್ತು ಅಮೂಲ್ಯವಾದ ಭಾಷಾಂತರಗಳು, ಮಾತ್ರವಲ್ಲದೆ ಇವುಗಳ ಮುದ್ರಣಕ್ಕಾಗಿ, ಪ್ರಕಾಶನಕ್ಕಾಗಿ, ಮತ್ತು ಸತ್ಯವನ್ನು ರವಾನಿಸುವುದಕ್ಕಾಗಿ ಅದ್ಭುತವಾದ ಸೌಲಭ್ಯಗಳು ಇವೇ ಮುಂತಾದ ಅನೇಕ ಆಶ್ಚರ್ಯಕರವಾದ ಸಹಾಯಗಳನ್ನು ಒದಗಿಸಿದ್ದಾನೆ. ಮತ್ತು ಎಲ್ಲರೂ ಒಂದುಗೂಡಿ ಓದುವ ಮತ್ತು ತಾವಾಗಿಯೇ ಅಧ್ಯಯನ ಮಾಡುವ ಸಾಮಾನ್ಯ ವಿದ್ಯಾಭ್ಯಾಸದ ಸೌಲಭ್ಯಗಳನ್ನೂ ದಯಪಾಲಿಸಿಕೊಟ್ಟಿದ್ದು ಮುಂದುವರೆದ ಸಿದ್ಧಾಂತಗಳನ್ನು ತಮ್ಮಷ್ಟಕ್ಕೆ ತೃಪ್ತಿಪಡಿಸಿಕೊಳ್ಳುವ ಅನುಕೂಲತೆಗಳನ್ನೂ ನೀಡಿದ್ದಾನೆ; ಇವುಗಳು ಯಾರೂ ಅವರನ್ನು ಉಪದ್ರವಪಡಿಸದಂತೆ ಅಥವಾ ಹಾಗೆ ಮಾಡುವಲ್ಲಿ ತಮ್ಮ ಮನಸ್ಸಾಕ್ಷಿಯನ್ನು ಪೂರ್ಣ ಸ್ವಾತಂತ್ರ್ಯದೊಡನೆ ಕಾರ್ಯಗತಗೊಳಿಸುವಂತೆ ಶಾಂತಿಯ ಪರಿಸ್ಥಿತಿಯನ್ನು ನೀಡಿದ್ದಾನೆ.

ಈ ಸಂಪುಟ ಮತ್ತು ಈ ಮೊದಲಿನ ಸಂಪುಟಗಳ ಹಿಂದಿನ ಅಧ್ಯಾಯಗಳನ್ನು ಲಕ್ಷ್ಯಪೂರ್ವಕವಾಗಿ ಓದಿದ ನಂತರ, ವಿಚಾರಪರ ಓದುಗನು ಪ್ರತಿಯೊಂದು ಸಮಯದ ಪ್ರವಾದನೆಗಳು ಪ್ರತ್ಯೇಕವಾದ ಮತ್ತು ವಿಶಿಷ್ಟ ಉದ್ದೇಶವನ್ನು ನೆರವೇರಿಸುವಾಗ ಅವುಗಳ ಕೇಂದ್ರೀಯ ಅನ್ಯೋನ್ಯವಾದ ಮತ್ತು ಸಾಮರಸ್ಯಕರ ಉದ್ದೇಶಗಳು ನಿಶ್ಚಿತತೆ ಮತ್ತು ನಿಷ್ಕೃಷ್ಟತೆಯಿಂದ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಅಥವಾ ಸಮರ್ಥಿಸುವ ಸಾಕ್ಷಿಗಳಿಂದ ನಮ್ಮ ಕರ್ತನ ದ್ವಿತೀಯಾಗಮನದ ಮತ್ತು ಭೂಲೋಕದಲ್ಲಿ ಆತನ ರಾಜ್ಯಸ್ಥಾಪನೆಯ ದಿನಾಂಕವನ್ನು ಗುರುತಿಸುವುದಾಗಿವೆ. ಮಾತ್ರವಲ್ಲದೆ ಸುಗ್ಗಿಯ ಕಾಲದಲ್ಲಿ ಅದರ ಸ್ಥಾಪನೆಯ ವಿವಿಧ ಹಂತಗಳನ್ನೂ ಮತ್ತು ಸಾಧನಗಳನ್ನೂ ಗುರುತಿಸುತ್ತವೆ.

ಪ್ರವಾದನೆಗಳ ವಿವಿಧ ಸಾಲುಗಳು ಅವುಗಳ ಕೇಂದ್ರೀಯ ಸತ್ಯಗಳ ಮೇಲೆ ಸಂಬಂಧಿಸಿರುವ ಬಲವನ್ನು ಗ್ರಹಿಸಿಕೊಳ್ಳುವಂತೆ ನಾವು ಅವುಗಳನ್ನು ಒಂದು ತೇಜಕೇಂದ್ರಕ್ಕೆ (focus) ಎಳೆಯೋಣ ಮತ್ತು ಈ ಸಾಕ್ಷಿಯ ಕಿರಣಗಳು ಯಾವ ರೀತಿಯಲ್ಲಿ ಅನ್ಯೋನ್ಯವಾಗಿ ಮತ್ತು ಸಾಮರಸ್ಯದಿಂದ ಬೆರಕೆಯಾಗುತ್ತವೆ ಎಂಬುದನ್ನು, ಕರ್ತನು ಬರುತ್ತಾನೆ ಎಂಬುದನ್ನಲ್ಲ, ಅಥವಾ ಆತನು ಬೇಗನೆ ಬರುತ್ತಾನೆ ಎಂಬುದನ್ನಲ್ಲ. ಆದರೆ ಆತನು ಬಂದಿದ್ದಾನೆ; ಆತನು ಈಗ ಒಬ್ಬ ಆತ್ಮೀಕ ಅರಸನಾಗಿ, ಆತ್ಮೀಕ ರಾಜ್ಯವನ್ನು ಸುವಾರ್ತಾ ಸುಗ್ಗಿಯಲ್ಲಿ ಅಥವಾ ಸುವಾರ್ತಾಯುಗದ ಅಂತ್ಯದಲ್ಲಿ ಸ್ಥಾಪಿಸುತ್ತಿದ್ದಾನೆ ಮತ್ತು ಅದು ಹೇಗೆ ಉದಯವಾಗುತ್ತಿರುವ ನೂತನ ಸಹಸ್ರಮಾನ ಯುಗದ ಮಡಿಲಲ್ಲಿ ಸೇರುತ್ತದೆ ಎನ್ನುವ ಆಶೀರ್ವದಿಸಲ್ಪಟ್ಟ ಸತ್ಯವನ್ನು ಸ್ಪಷ್ಟವಾಗಿ ಬಹಿರಂಗಪಡಿಸುತ್ತವೆ. "ಸಮಸ್ತವನ್ನೂ ಸರಿಪಡಿಸುವ ಕಾಲ" – "ವಿಶ್ರಾಂತಿ ಕಾಲಗಳು" ಬರಬೇಕಾಗಿದೆ ಎಂಬುದನ್ನು ನಾವು ನೋಡಿದ್ದೇವೆ (ಅ.ಕೃ 3:19); ಕರ್ತನಾದ ಯೆಹೋವನು "ಒಂದು ದಿನವನ್ನು (ಸಹಸ್ರಮಾನವನ್ನು) ಗೊತ್ತುಪಡಿಸಿದ್ದಾನೆ" ಮತ್ತು ಅದರಲ್ಲಿ ಆತನು ಲೊಕದ ನೀತಿಗನುಸಾರವಾಗಿ ತಾನು ಅಭಿಷೇಕಿಸಿದ ಪುರುಷನ ಮೂಲಕ ನ್ಯಾಯವನ್ನು ತೀರಿಸುತ್ತಾನೆ ಎಂಬುದು ನಮಗೆ ತಿಳಿದದೆ. ಆತನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಿದ್ದಾನೆ ಎಂಬ ಭರವಸೆಯನ್ನು ಎಲ್ಲರಿಗೂ ಕೊಟ್ಟಿದ್ದಾನೆ (ಅ.ಕೃ 17:31). ಸುವಾರ್ತಾಯುಗವು ಸಭೆಯ ಪರೀಕ್ಷಾ ಸಮಯ ಅಥವಾ ನ್ಯಾಯತೀರ್ವಿಕೆಯ ದಿನವಾಗಿದೆ ಎಂಬುದನ್ನು ನಾವು ನೋಡಿದ್ದೇವೆ. ಅದು ಸುಗ್ಗಿಯಿಂದ, ಕ್ರಿಸ್ತನಲ್ಲಿ ಜೀವಿಸುತ್ತಾ ಆತನೊಂದಿಗೆ ಸಹಸ್ರ ವರ್ಷಗಳವರೆಗೆ ಆಳುವವರ ವೈಭವೀಕರಣದಲ್ಲಿ, ಪುನಃವಶ ಕಾಲದಲ್ಲಿ ಮುಕ್ತಾಯವಾಗುತ್ತದೆ. ಇಹಲೋಕಾಧಿಪತಿಯ ವಶದಲ್ಲಿರುವ ಈ ಲೋಕದ ರಾಜ್ಯಗಳು ಮಹಿಮೆಯ ರಾಜನ ಅಧೀನದಲ್ಲಿರುವ ದೇವರ ರಾಜ್ಯಕ್ಕೆ ಸ್ಥಳವನ್ನು ನೀಡಲೇ ಬೇಕಾಗುತ್ತದೆ ಎಂಬುದನ್ನೂ ನಾವು ನೋಡಿದ್ದೇವೆ. ಈ ಎಲ್ಲಾ ಮಹಾ ಘಟನೆಗಳೂ ಕರ್ತನ, ಅರಸನ, ಮದಲಿಂಗನ, ಕೊಯ್ಲುಗಾರನ ದ್ವಿತೀಯಾಗಮನದವರೆಗೆ ವಿಳಂಬವಾಗಲೇ ಬೇಕು, ಮೊದಲೇ ತಿಳಿಸಿರುವಂತೆ ಆತನ ಪ್ರಸನ್ನತೆ ಮತ್ತು ಕಾರ್ಯವು ಅವುಗಳನ್ನು ಸಾಧಿಸಬೇಕಾಗುತ್ತದೆ.

ಈ ಸಾಂಕೇತಿಕ ಜೂಬಿಲಿ ವೃತ್ತವು ಕ್ರಿ.ಶ. 1874 ನಮ್ಮ ಕರ್ತನ ಆಗಮನ ದಿನವೆಂದು ಸೂಚಿಸಿದೆ; ಆದಾಗ್ಯೂ ಅದರಲ್ಲಿನ ದಿನಾಂಕವು 'ಅಂತ್ಯಕಾಲದವರೆಗೆ' ಅದನ್ನು ಕಂಡುಹಿಡಿಯುವುದು ಅಸಾಧ್ಯವಾಗುವಂತೆ ಚತುರತೆಯಿಂದ ಅಡಗಿಸಲ್ಪಟ್ಟಿದೆ. ಈ ಸಾಕ್ಷ್ಯವನ್ನು – ಧರ್ಮಶಾಸ್ತ್ರ ಮತ್ತು ಪ್ರವಾದನೆಗಳೆಂಬ ಎರಡು ದೃಷ್ಟಿಕೋನಗಳಿಂದ ದುಪ್ಪಟ್ಟು ಬಲವುಳ್ಳದ್ದಾಗಿ ಮಾಡಲ್ಪಟ್ಟಿದೆ – ಇವೆರಡೂ ಒಂದಕ್ಕೊಂದು ಪರಸ್ಪರ ಸ್ವತಂತ್ರವಾಗಿವೆಯಾದರೂ ಸಮವಾಗಿ ಸ್ಪಷ್ಟವೂ ಮತ್ತು ಮನದಟ್ಟುಪಡಿಸಬಹುದಾದವುಗಳೂ ಆಗಿವೆ.

ಯೆಹೂದ್ಯ ಮತ್ತು ಸುವಾರ್ತಾ ಹಂಚಿಕೆಗಳ ಅದ್ಭುತವಾದ ಸಮಾನಾಂತರತೆಗಳು ಹೆಚ್ಚುವರಿ ಲಕ್ಷಣಗಳೊಂದಿಗೆ ನಮಗೆ ಈ ಸತ್ಯವನ್ನು ಕಲಿಸಿಕೊಟ್ಟಿವೆ. ಸುವಾರ್ತಾ ಯುಗದ ಸುಗ್ಗಿಯಲ್ಲಿ ಕರ್ತನ ದ್ವಿತೀಯಾಗಮನವು 1874ರಲ್ಲಿ ಶರತ್ಕಾಲದಲ್ಲಿ

ಕಾಣಿಕೊಳ್ಳುತ್ತದೆ ಎಂಬುದು ಆತನ ಮೊದಲ ಆಗಮನದ ಒಂದು ಅಂಶಕ್ಕೆ ಕರಾರುವಕ್ಕಾಗಿ ಯೆಹೂದ್ಯಕಾಲದ ಅಂತ್ಯದಲ್ಲಿ ಸಮಾನಂತರವಾಗಿರುವುದು ರುಜುವಾತಾಗುತ್ತದೆ. (See table of Correspondences Vol II., 246 and 247, ಕನ್ನಡದಲ್ಲಿ 142ನೇ ಪುಟದಲ್ಲಿ ಕೊಡಲಾಗಿದೆ). ಸುವಾರ್ತಾ ಹಂಚಿಕೆಯ ಪ್ರತಿಯೊಂದು ಲಕ್ಷಣವೂ ಅದಕ್ಕೆ ಆ ಸಾಂಕೇತಿಕ ಹಂಚಿಕೆಯಲ್ಲಿ ಅನುಗುಣವಾಗಿರುವುದರಿಂದ ಜೂಬಿಲಿಯಿಂದ ಕಲಿಸಲ್ಪಟ್ಟ ಈ ಗಮನಾರ್ಹ ಘಟನೆಯು ಅದಕ್ಕೆ ಅನುರೂಪವಾದ ಸಮಾನಾಂತರವನ್ನು ಹೊಂದಿದೆ ಎಂಬುದನ್ನು ನಾವು ಕಂಡುಕೊಳ್ಳುತ್ತೇವೆ. ಮದಲಿಂಗನಾಗಿ, ಕೊಯ್ಲುಗಾರನಾಗಿ ಮತ್ತು ಅರಸನಾಗಿ ನಮ್ಮ ಕರ್ತನ ಪ್ರಸ್ತುತಿಯು ಎರಡೂ ಹಂಚಿಕೆಗಳಲ್ಲಿಯೂ ಕಂಡುಬರುತ್ತದೆ. ಕನ್ಯೆಯರು ಆತನನ್ನು ಸಂಧಿಸಲು ಹೋಗುವ ಚಲನೆಯಲ್ಲಿಯೂ, ಅವರ ನಿರಾಶೆ ಮತ್ತು ಮೂವತ್ತು ವರ್ಷಕಾಲಗಳ ವಿಳಂಬ ಅವರ ಸಮಾನಾಂತರವನ್ನು ಸಮಯ ಮತ್ತು ಪರಿಸ್ಥಿತಿಗಳಲ್ಲಿ ಕಂಡುಕೊಳ್ಳುತ್ತದೆ. ಈ ಸಮಾನಾಂತರವು ಈ ಹಂಚಿಕೆಯ ಸುಗ್ಗಿಯ ಪೂರ್ಣಾಂತ್ಯದವರೆಗೆ, ಹೆಸರುಮಾತ್ರದ ಕ್ರೈಸ್ತ ರಾಜ್ಯಗಳನ್ನು, ನಿಜವಾಗಿ ಈ ಲೋಕದ ರಾಜ್ಯಗಳನ್ನು ಕಿತ್ತುಹಾಕುವ ಪ್ರಾರಂಭದವರೆಗೆ, ನಿಜವಾಗಿ ಅದರ ವಿರುದ್ಧವಾಗಿ ದೇವರರಾಜ್ಯವು ಈ ಲೋಕದಲ್ಲಿ 1914ರಲ್ಲಿ ಸ್ಥಾಪಿಸುವವರೆಗೆ ಮುಂದುವರೆಯುತ್ತದೆ. ಇದು ಅನ್ಯಜನಗಳ ಕಾಲದ ಎಲ್ಲೆಯಾಗಿದೆ. (ಸಂಪುಟ II, ಅಧ್ಯಾಯ ivನ್ನು ನೋಡಿರಿ). ಈ ತೊಂದರೆ ಮತ್ತು ಕಿತ್ತುಹಾಕುವಿಕೆಯ ಭಾಗಗಳು ಕ್ರಿ.ಪೂ. 70ರಲ್ಲಿ ನಡೆದ ಯೆರೂಸಲೇಮಿನ ಪಾಳುಬೀಳುವಿಕೆಯಲ್ಲಿ ಮತ್ತು ಯೆಹೂದ್ಯ ರಾಜ್ಯಾಡಳಿತದ ಉಚ್ಚಾಟನೆಯು ಸಮಾನಾಂತರ ಹೊಂದಿರುವುದನ್ನು ನಾವು ನೋಡಿದ್ದೇವೆ ಇದು ಎರಡೂ ಸಮಯ ಮತ್ತು ಪರಿಸ್ಥಿತಿಗಳಲ್ಲಿ ಮತ್ತೊಂದು ಸಮಾನಾಂತರವೂ, ಅನುರೂಪವಾದದೂ ಆಗಿದೆ.

ಪುನಃ ನಾವು ಕರ್ತನ ದ್ವಿತೀಯಾಗಮನದ ಸೂಚನೆಯನ್ನು ಪ್ರವಾದಿಯಾದ ದಾನಿಯೇಲನ ಗ್ರಂಥ 12:1ರಲ್ಲಿ ಕಾಣಬಹುದು, ಅದಾಗ್ಯೂ ಮುಂತಿಳಿಸಿದ ಘಟನೆಗಳು ಇತಿಹಾಸದೊಳಗೆ ವರ್ಗಾಯಿಸುವವರೆಗೂ ಮುಚ್ಚಿಡಲ್ಪಡುವ ರೀತಿಯಲ್ಲಿ ಮಿಕಾಯೇಲನ ಹೆಸರಿನಲ್ಲಿ "ದೇವರ ಪ್ರತಿನಿಧಿ ಮಹಾ ಅರಸನು" ಎಂಬುದಾಗಿ ನಿಜವಾಗಿಯೂ ಸೂಚಿತವಾಗುತ್ತದೆ. ಹೌದು, ನಾವು ಆತನನ್ನು "ಒಡಂಬಡಿಕೆಯ ಪ್ರಭು", "ಶಕ್ತನಾದ ದೇವರು" (ಅರಸ), "ನಿತ್ಯನಾದ ತಂದೆ" (ಜೀವದಾಯಕನು) (ದಾನಿ. 11:22; ಯೆಶಾಯ 9:6) ಎಂದು ಗುರುತಿಸುತ್ತೇವೆ. ಆತನು ಶಕ್ತಿ ಮತ್ತು ಅಧಿಕಾರದೊಂದಿಗೆ ಎಲ್ಲವುಗಳನ್ನು ಪುನರ್‌ವಶಗೊಳಿಸುವುದಕ್ಕಾಗಿ, ಮುಂದೆ ಸಾಯಲಿರುವ ಮತ್ತು ಈಗಾಗಲೇ ಮರಣಹೊಂದಿರುವ ಮಿಲಿಯಾಂತರ ಜನರಿಗೆ ತನ್ನ ಅಮೂಲ್ಯವಾದ ಸ್ವರಕ್ತದಿಂದ ವಿಮೋಚನೆಗೊಂಡಿರುವ ನಿತ್ಯಜೀವವನ್ನು ಕೊಡುವುದಕ್ಕಾಗಿ ಎದ್ದು ಬರುತ್ತಾನೆ. ದಾನಿಯೇಲನ 12ನೇ ಅಧ್ಯಾಯದ 1335 ದಿನಗಳನ್ನು ಅದೇ ದಿನಾಂಕವನ್ನು ಅವುಗಳ ಅಂತ್ಯದವರೆಗೂ ಪತ್ತೆಹಚ್ಚಿದ್ದು, ನಾವೀಗ ಯಾಕೆ ಆ ರೀತಿಯಲ್ಲಿ ಸೂಚಿಸಿದ ದೇವದೂತನು ಅದನ್ನು "ಕಾದುಕೊಂಡು (ಕಾಯುತ್ತಾ ಅಥವಾ ಕಾಯುವ ಮನೋವೃತ್ತಿಯಲ್ಲಿರುವವರು) ಸಾವಿರದ ಮುನ್ನೂರ ಮೂವತ್ತೈದು ದಿನಗಳ ಕೊನೆಯು ಮಟ್ಟಿಗೆ ತಾಳಿರುವವನು ಧನ್ಯನು" (ದಾನಿ. 12:12) ಎಂಬ ಅಂಥಾಃ ಸಂಭ್ರಮದ ಮಾತುಗಳನ್ನು ಏಕೆ ಹೇಳಬೇಕಿತ್ತೆಂದು ನಮಗೀಗ ಅರ್ಥವಾಗುತ್ತದೆ. ಇದು 1874* ಆಗಿದೆ. ಮತ್ತು ಇಲ್ಲಿ ನೀಡಲಾಗಿರುವ ಸಾಂಕೇತಿಕ ಕಾಲವನ್ನು ನಾವು ಲೆಕ್ಕ ಹಾಕುವಾಗ ಮೊದಲನೆಯ ಆಗಮನವನ್ನು ಅಕ್ಷರಶಃ ವರ್ಷವನ್ನು ಪ್ರತಿನಿಧಿಸುವ ಸಾಂಕೇತಿಕ ದಿನವನ್ನು ಸೂಚಿಸುವ ವಿಧಾನದಿಂದ ನಮಗೆ ಒದಗಿಸಿದ್ದನ್ನು ನಾವು ಕಡೆಗಣಿಸುವಂತಿಲ್ಲ, ಒಂದು ಸಾಂಕೇತಿಕ ದಿನ ಒಂದು ಅಕ್ಷರಶಃ ವರ್ಷವನ್ನು ಪ್ರತಿನಿಧಿಸುತ್ತದೆ. ಹೀಗಿರುವುದರಿಂದ ನಮ್ಮ ಕರ್ತನ ಎರಡನೆಯ ಆಗಮನದ ಸಮಯವು 1874ರ ಅಕ್ಟೋಬರ್ ಎಂದು ಎರಡನೆಯ ಸಂಪುಟದ ಆರನೇ ಅಧ್ಯಾಯದ ಪ್ರಕಾರ ನಮಗೆ ಸ್ಪಷ್ಟವಾಗಿ ಸಾಬೀತಾಗಿದೆ.

ಆದರೆ ಇದು ಅಷ್ಟೇ ಅಲ್ಲ. ಕ್ರಿಸ್ತನ ಪತ್ಯಕ್ಷತೆಯ ನಂಬಿಕೆಯ ಬಗ್ಗೆ ಕೆಲವೊಂದು ವೈಚಾರಿಕವಾದ ಆ ಅಡಚಣೆಗಳು ಜಾಗರೂಕ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಇನ್ನೂ ಏಳುತ್ತವೆ ಮತ್ತು ಇವೆಲ್ಲವುಗಳೂ ತೆಗೆಯಲ್ಪಡಬೇಕು ಎಂಬುದನ್ನು ನಾವು ಬಯಸುತ್ತೇವೆ. ಉದಾ.: ಜೂಬಿಲಿ ವೃತ್ತಗಳು 1874ರ ಅಕ್ಟೋಬರನ್ನು ಯೇಸುವಿನ ಆಗಮನ ದಿನಾಂಕ ಮತ್ತು ಪುನಃವಶದ ಆರಂಭಕಾಲ ಎಂದು ತೋರಿಸುವಾಗ, ಸತ್ಯವೇದದ ಕರಾರುವಕ್ಕಾದ ಕಾಲಗಣನೆಗಳು 1872ನ್ನು ಏಳನೆಯ ಸಹಸ್ರ ವರ್ಷಗಳ ಆರಂಭವೆಂದು, ಅಥವಾ ಸಹಸ್ರಮಾನವೆಂದು ಹೇಗೆ ಸೂಚಿಸುತ್ತದೆ? ಎಂಬುದನ್ನು ಸಮಂಜಸವಾಗಿ ವಿಚಾರಿಸಬಹುದು.

* ವರುಷದ ಆರಂಭದ ಪರಿಗಣನೆಯೂ ಯೆಹೂದ್ಯರ ಪ್ರಕಾರ ಅಕ್ಟೋಬರ್‌ನಲ್ಲಿ ಪ್ರಾರಂಭವಾಗುತ್ತದೆ. ಹಾಗಾಗಿ ಅಕ್ಟೋಬರ್ 1874 ವಾಸ್ತವವಾಗಿ 1875ರ ಪ್ರಾರಂಭ.

ದ್ವಿತೀಯಾಗಮನದ ದಿನಾಂಕದ ಬಗ್ಗೆ ಮತ್ತು ಏಳನೆಯ ಸಹಸ್ರ ವರ್ಷದ ಆರಂಭ ಇವುಗಳೊಂದಿಗೆ ವ್ಯಕ್ತವಾಗುತ್ತಿರುವ ಸಾಮರಸ್ಯವಿಲ್ಲದಿರುವಿಕೆಯು ಕಾಲಗಣನೆಯ ಲೆಕ್ಕಾಚಾರದಲ್ಲಿ ಯಾವುದೋ "ತಿರುಪು (ಸ್ಕ್ರೂ)" ಸಡಿಲವಾಗಿದೆ ಎಂಬುದಾಗಿ ಮೊದಲ ನೋಟಕ್ಕೆ ಕಂಡುಬರುತ್ತದೆ ಮತ್ತು ವಿಷಯದ ಜಾಗರೂಕ ಮರುಪರಿಕ್ಷೆಗೆ ನಡೆಸುತ್ತದೆ. ಆದರೆ ಅದೇ ಫಲಿತಾಂಶಕ್ಕೆ ನಡೆಸುತ್ತದೆ. ಆದರೆ ನಿಕಟವಾದ ಆಲೋಚನೆಗಳು ದೇವರು ಕರಾರುವಕ್ಕಾದ ಸಮಯಪಾಲಕನು ಮತ್ತು ಈ ಅಂಶವು ಆತನ ಗಣಿತ ನಿಷ್ಕೃಷ್ಟತೆಗೆ ಹೊರತಾದುದಲ್ಲ ಎಂಬುದನ್ನು ರುಜುವಾತುಪಡಿಸುತ್ತದೆ. ಕಾಲಗಣನೆಗಳ ಲೆಕ್ಕಾಚಾರವು ಆದಾಮನ ಸೃಷ್ಟಿಯಿಂದಲೇ ಪ್ರಾರಂಭವಾಯಿತು, ಆದರೆ ಪಾಪವು ಪ್ರವೇಶ ವಾಗುವವರೆಗೆ ಆದಾಮು ಹವ್ವರು ಕೆಲವು ಸಮಯಗಳನ್ನು ಕಳೆದಿದ್ದರು ಎಂಬುದನ್ನು ನೆನಪಿನಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಅದು ಎಷ್ಟು ಸಮಯವೆಂಬುದನ್ನು ನಮಗೆ ತಿಳಿಸಲ್ಪಟ್ಟಿಲ್ಲ. ಆದರೆ ಎರಡು ವರ್ಷಗಳು ಎಂಬುದು ಅಸಾಧ್ಯವಾದ ಲೆಕ್ಕಾಚಾರವಾಗದು. ಹವ್ವಳು ಸೃಷ್ಟಿಯಾಗುವ ಮೊದಲು ಆದಾಮನಿಗೆ ತಾನು ಏಕಾಂಗಿಯಾಗಿದ್ದೇನೆ ಎಂಬುದನ್ನು ಅರಿತು ಕೊಳ್ಳುವವರೆಗೆ ದೀರ್ಘಕಾಲ ಜೀವಿಸುವ ಅನುಮತಿ ಇದ್ದಿರಬೇಕು (ಆದಿ. 2:20); ಆತನು ಅದಕ್ಕೆ ಪರಿಚಯಗೊಂಡಿದ್ದು ಎಲ್ಲಾ ಪ್ರಾಣಿಗಳಿಗೆ ಹೆಸರನ್ನಿಟ್ಟನು; ಆತನು ಏದೇನಿನ ವಿವಿಧ ಮರಗಿಡಗಳ ಬಗ್ಗೆಯೂ ಪರಿಣಿತಿ ಹೊಂದಿದ್ದನು. ನಂತರ ಹವ್ವಳ ಸೃಷ್ಟಿ ಅನುಸರಿಸಿತು; ನಾಶಕರ ಪಾಪವು ಪ್ರವೇಶವಾಗುವವರೆಗೆ ಕೆಲವು ಸಮಯಗಳು ಅವರ ಸಂತೋಷಭರಿತ ಪರಿಸರದ ಆನಂದ ಸವಿಯಲು ಹಿಡಿದ್ದಿರಬಹುದು.

ಈ ಎಲ್ಲಾ ಸಂದರ್ಭಗಳನ್ನು ಮನಸ್ಸಿಗೆ ತಂದುಕೊಂಡು, ಎರಡು ವರ್ಷಗಳಿಗಿಂತಲೂ ಕಡಿಮೆ ಸಮಯವು ಆ ಪಾಪರಹಿತ ಸಮಯದಲ್ಲಿ ಕಳೆದಿದ್ದಿರಬಹುದೆಂದು ನಾವು ಕ್ವಚಿತ್ತಾಗಿ (ಅಗಣನೀಯವಾಗಿ) ಊಹಿಸಬಹುದು, ಆರು ಸಹಸ್ರವರ್ಷಗಳ ಅಂತ್ಯ ಮತ್ತು ಪುನಃವಶದ ಕಾಲದ ಪ್ರಾರಂಭ ಇವುಗಳ ನಡುವಣ ಕಾಲವು ಆದಾಮನ ಸೃಷ್ಟಿಯ ಹಾಗೂ ಪಾಪ ಪ್ರವೇಶದ ನಡುವಣ ಕಾಲದಲ್ಲಿ ದೇವರ ರಾಜ್ಯವು ಈ ಲೋಕದಲ್ಲಿ ಇತ್ತು ಮತ್ತು ಅದು ಆದಾಮನಲ್ಲಿ ಪ್ರತಿನಿಧಿತ್ವಗೊಂಡಿತ್ತು ಮತ್ತು ಅದನ್ನು ಆರು ದಿನಗಳ ಕೆಡುಕನ ಕಾಲವೆಂದು ಲೆಕ್ಕಕ್ಕೆ ತೆಗೆದುಕೊಂಡಿಲ್ಲ ಎಂಬ ಊಹನೆಗೆ ನಡೆಸುತ್ತದೆ. ಮಹತ್ವದ ಏಳನೆಯ ಅಥವಾ ಸಬ್ಬತ್ತಿನ ಸಹಸ್ರ ವರ್ಷಗಳ, ಪುನರ್‌ವಶದ ಕಾಲದ ಮೊದಲು, ಪಾಪವು ಲೋಕದೊಳಗೆ ಪ್ರವೇಶಿಸಿದ ಕಾಲದಿಂದ ದೇವರು ಕೆಡುಕನಿಗೆ ಈ ಲೋಕದಲ್ಲಿ ಪ್ರಭುತ್ವಕ್ಕೆ ಬರುವಂತೆ ಅನುಮತಿಸಿದ ಆರು ಸಾವಿರ ವರ್ಷಗಳಾಗಿವೆ. ಆದರೆ ಪುನರ್‌ವಶದ ಕಾಲವು ಪ್ರಾರಂಭಗೊಂಡಿರುವುದು 1874 ಅಕ್ಟೋಬರ್ ಆಗಿರುವುದರಿಂದ ಅದು ಪಾಪದ 6000 ವರ್ಷಗಳ ಆಳ್ವಿಕೆಯ ಮುಕ್ತಾಯವಾಗಿರಬೇಕು. ಮತ್ತು ಅದರ ಮತ್ತು ಆದಾಮನ ಸೃಷ್ಟಿಯಿಂದ ನಡೆದ ಕಾಲಗಣನೆಗಳ ಪ್ರಕಾರ ಕಂಡು ಬಂದ ವ್ಯತ್ಯಾಸವು ಪಾಪರಹಿತವಾಗಿ ಏದೇನಿನಲ್ಲಿ ಕಳೆದ ಕಾಲವಾಗಿದೆ ಮತ್ತು ಅದು ನಿಜವಾಗಿಯೂ ನೀತಿವಂತಿಕೆಯ ಆಳ್ವಿಕೆಯನ್ನು ಪ್ರತಿನಿಧಿಸುತ್ತದೆ.

ಪುನಃ ಯಾವುದು ಮೊದಲ ಆಲೋಚನೆಯಲ್ಲಿ ವ್ಯತ್ಯಾಸವುಳ್ಳದ್ದಾಗಿ ಕಂಡು ಬಂದಿತೋ ಅದು, ಅಂದರೆ ನಮ್ಮ ಕರ್ತನು 1874ರ ಅಂತ್ಯಕ್ಕೆ ಬರುತ್ತಾನೆಂಬುದು ಮತ್ತು ಇನ್ನೂ ಆ ಅನ್ಯಜನರ ಕಾಲ 1914ರವರೆಗೂ ಮುಗಿಯುವುದಿಲ್ಲ ಎಂಬುದು ಅದಕ್ಕೆ ವಿರೋಧವಾಗಿ ದೇವರ ಇನ್ನೂ ಬಿಚ್ಚಿಡದ ಯೋಜನೆಯುಳ್ಳ ಕದನದ ಆ ಮಹಾದಿನದ ಹೋರಾಟದೊಂದಿಗೆ ದಾನಿಯೇಲನು ಮುಂತಿಳಿಸಿದಂತೆಯೇ ಸಾಮರಸ್ಯವುಳ್ಳದ್ದಾಗಿದೆ. ಆತನು "ಆ ರಾಜರ ಕಾಲದಲ್ಲಿ ಪರಲೋಕದ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು; ಅದು ಎಂದೆಂದಿಗೂ ಅಳಿಯದು, ಅದರ ಪ್ರಾಬಲ್ಯವು ಬೇರೆ ಜನಾಂಗಕ್ಕೆ ಕದಲಿಹೋಗದು. ಅದು ರಾಜ್ಯಗಳನ್ನೆಲ್ಲಾ ಭಂಗಪಡಿಸಿ, ನಿರ್ನಾಮಮಾಡಿ, ಶಾಶ್ವತವಾಗಿ ನಿಲ್ಲುವುದು" (ದಾನಿ. 2:44) ಎಂದು ಪ್ರಕಟಿಸಿದ್ದಾನೆ. ಅದುದರಿಂದ ಅದು ನಾವು ಕಂಡುಕೊಂಡಂತೆಯೇ ಇರುವುದು; ನಮ್ಮ ಕರ್ತನು ಪ್ರತ್ಯಕ್ಷಗೊಳ್ಳಬೇಕು, ಆತನ ಸಭೆಯ ಜೀವಂತ ಸದಸ್ಯರನ್ನು ಪರೀಕ್ಷಿಸಬೇಕು, ಅವರನ್ನು ಉನ್ನತಕ್ಕೇರಿಸಬೇಕು, ಮಹಿಮೆಪಡಿಸಬೇಕು ಮತ್ತು ಅವರೊಂದಿಗೆ ಸಹಸ್ರ ಮಾನದಲ್ಲಿ ಕಾರ್ಯಗತ ಗೊಳಿಸುವ ಶಕ್ತಿ ಮತ್ತು ಅಧಿಕಾರದಲ್ಲಿ ತಾನೂ ಭಾಗಿಯಾಗಬೇಕು (ಪ್ರಕಟನೆ 5:10; 20:6) ಮತ್ತು ಆ ಸಾಧನತೆಗಳನ್ನು ಮತ್ತು ಪಾರುಪತ್ಯಗಳನ್ನು (ಅವುಗಳ ಬಗ್ಗೆ ತಾವೇ ಅರಿವಿಲ್ಲದವರಾಗಿದ್ದರೂ) ಆತನ ಆಜ್ಞೆಗಳನ್ನು ಕೈಕೊಳ್ಳುವಂತೆ ಅವರನ್ನು ಚಾಲನೆ ಯಲ್ಲಿಡಬೇಕು. ಆ ರೀತಿಯಾಗಿ ಅವರು ಸರ್ವಶಕ್ತನಾದ ದೇವರ ಮಹಾದಿನದಲ್ಲಾಗುವ ಯುದ್ಧಕ್ಕೆ ತಮ್ಮ ಪಾಲಿನದನ್ನು ಎಲ್ಲಾ ಕ್ರೈಸ್ತ ದೇಶಗಳು ಎಂದು ಹೇಳಿಕೊಳ್ಳುವವರನ್ನು ಗೌರವಿಸದೆ ಮತ್ತು ಅಂತಿಮವಾಗಿ ಅವರನ್ನು ಪರಾಭವಗೊಳಿಸುವಂತೆ ಮಾಡಬೇಕು. ಈ ಲೋಕದ ರಾಜ್ಯಗಳು" ಪರಲೋಕದ ರಾಜ್ಯದಿಂದ


ತುಳಿಯಲ್ಪಟ್ಟರೂ, ಅವರು ತಮ್ಮ ಅವನತಿಯ ನಿಜವಾದ ಕಾರಣವನ್ನು ಅದುವರೆಗೆ ತಿಳಿಯದೇ ಹೋಗುವರು. ಈ ಕ್ರೋಧದ ದಿನದ ಅಂತ್ಯದಲ್ಲಿ ಅವರ ತಿಳುವಳಿಕೆಯ ಕಣ್ಣುಗಳು ತೆರೆಯಲ್ಪಡುತ್ತವೆ. ಹೀಗಾಗಿ ಅವರು ನೂತನ ಹಂಚಿಕೆಯು ಉದಯವಾಗಿರುವುದನ್ನು ಕಾಣುತ್ತಾರೆ ಮತ್ತು ಇಮ್ಮಾನುವೇಲನು ತನ್ನ ನೂತನ ಮಹಾ ಅಧಿಕಾರವನ್ನು ವಹಿಸಿಕೊಂಡಿದ್ದಾನೆ ಮತ್ತು ತನ್ನ ಭವ್ಯವಾದ, ನೀತಿವಂತಿಕೆಯ ಆಳ್ವಿಕೆಯನ್ನು ಪ್ರಾರಂಭಿಸಿದ್ದಾನೆ ಎಂಬುದನ್ನು ಕಲಿತುಕೊಳ್ಳುವರು.

ಕಾಲ ಪ್ರವಾದನೆಗಳು ಈ ರೀತಿಯಲ್ಲಿ 1874ನ್ನು ಅದು ನಮ್ಮ ಕರ್ತನ ಎರಡನೆಯ ಪ್ರತ್ಯಕ್ಷತೆಯ ದಿನವೆಂದು ಸೂಚಿಸಿ ಅದರೊಂದಿಗೆ ಸಾಮರಸ್ಯ ಗೊಳ್ಳುವಾಗ, ಅದು ನಮಗೆ ಗಣಿತದ ನಿಷ್ಕರ್ಷತೆಯ ಭರವಸೆ ನೀಡುವುದಾಗಿದ್ದು ನಾವು ಮತ್ತೊಂದು ರೀತಿಯ ಪುರಾವೆಯೊಂದಿಗೆ ಭಾವಪರವಶರಾಗುತ್ತೇವೆ; ಕರ್ತನು, ಅಪೋಸ್ತಲರುಗಳು ಮತ್ತು ಪ್ರವಾದಿಗಳು ಕರ್ತನ ಬರೋಣದ ಮೊದಲು ನೆರವೇರುವುದೆಂದು ಮುಂತಿಳಿಸಿದ್ದ ಕೆಲವೊಂದು ವಿಶಿಷ್ಟ ಸೂಚನೆಗಳು ಈಗ ನಿಜವಾಗಿಯೂ ನೆರವೇರಿದಂತೆ ಗ್ರಹಿಸಲ್ಪಡುತ್ತವೆ. ವಾಗ್ದಾನಪಡಿಸಿದಂತೆ ಎಲೀಯನು ನಿಜವಾಗಿಯೂ ಬಂದನೆಂದು ನಾವು ನೋಡುತ್ತೇವೆ; ಭವಿಷ್ಯ ನುಡಿದಂತೆ ಆತನ ಬೋಧನೆಗಳನ್ನು ತಿರಸ್ಕರಿಸಲಾಯಿತು. ಆದುದರಿಂದ ಸಂಕಟದ ಸಮಯಗಳು ಅದನ್ನು ಅನುಸರಿಸಬೇಕು. ಮುಂತಿಳಿಸಿದ ಪಾಪಿಯಾದ ಮನುಷ್ಯನು (ಅಧರ್ಮ ಸ್ವರೂಪನು) ಸಹ ಕಾಣಿಸಿಕೊಂಡಿದ್ದಾನೆ ಮತ್ತು ತನ್ನ ದೀರ್ಘವಾದ ಭೀಕರವಾದ ಆಳ್ವಿಕೆಯನ್ನು ನೆರವೇರಿಸಿದ್ದಾನೆ; ಮತ್ತು 'ನೇಮಕವಾದ ಸಮಯ'ದಲ್ಲಿ (1799) ಆತನ ರಾಜ್ಯವನ್ನು ಕಿತ್ತುಕೊಳ್ಳಲಾಯಿತು. ಪವಿತ್ರಾಲಯದ ಶುದ್ಧೀಕರಣವು ಸಹ ನುಡಿದ ಭವಿಷ್ಯದಂತೆ ನೆರವೇರಿತು ಮತ್ತು 1874ಕ್ಕೆ ಸಾಕಷ್ಟು ಮುಂಚಿತವಾದ ಸಮಯದಲ್ಲಿ "ಸಿದ್ಧವಾದ ಜನರನ್ನು ಕರ್ತನಿಗೆ ಒದಗಿಸುವಂತೆ" – ಆತನ ಬರೋಣವನ್ನು ನಿರೀಕ್ಷಿಸುತ್ತಿರುವ ಭಕ್ತಿಸಂಪನ್ನರಾದ ಜನರನ್ನು – ಮೊದಲನೆಯ ಆಗಮನದ ಮೊದಲು ಕಾರ್ಯವೆಸಗಿದಂತೆಯೇ ಆತನನ್ನು ಅಂಗೀಕರಿಸುವ ಜನರನ್ನಾಗಿ ಮಾಡಲಾಯಿತು.

1874 ಎಂಬ ದಿನಾಂಕವು ದಾನಿಯೇಲನ ಪ್ರವಾದನೆ (12:1)ಕ್ಕೆ ಸಾಮರಸ್ಯಗೊಂಡಿದೆ ಎಂಬುದನ್ನು ನಾವು ನೋಡುತ್ತೇವೆ, ಅದು 'ಅಂತ್ಯಕಾಲ'ದಲ್ಲಿ 'ಮೀಕಾಯೇಲ'ನ ಆಗಮನವನ್ನು ಸೂಚಿಸುತ್ತದೆ. ಅದು 1799 ಮತ್ತು 1914ರ ನಡುವೆ ಎಲ್ಲಿಯೋ ಸಂಕಷ್ಟ ಕಾಲದ ಕಾರಣ ಮತ್ತು ಪೂರ್ವಗಾಮಿಯಾಗಿ ಇದೆ. ಯಾವಾಗ ಈ ಸಿದ್ಧತೆಯ ಎಪ್ಪತ್ತೈದು ವರ್ಷಗಳು ಆತನ ಮಹಾ ಕಾರ್ಯದ ಪ್ರಾರಂಭವಾಗಿ ವೃದ್ಧಿ ಹೊಂದುತ್ತದೆಯೋ, ಆಗ ಪ್ರಭುವು ಬಾಹ್ಯದೃಶ್ಯದಲ್ಲಿ, ಆತನು ಯಾವುದೇ ತೋರಿಕೆಗಳಿಲ್ಲದೆ ಹೋದ ಶಾಂತ ರೀತಿಯಲ್ಲಿ ಪಾದಾರ್ಪಣೆ ಮಾಡುತ್ತಾನೆ. ಮತ್ತೂ ಈ ಸಿದ್ಧತೆಯ ದಿನಗಳಲ್ಲಿ ಉಳಿಯುವದು ನಾಲ್ವತ್ತು ವರ್ಷಗಳು, ಇದರಲ್ಲಿ ಹದಿನಾರು ಹಿಂದೆಯೇ ಇದ್ದು, ಅವುಗಳು ಆತನ ಅಧಿಕಾರಯುತ ಹಾಗೂ ಮಹಿಮೆಯ ರಾಜ್ಯ ಸ್ಥಾಪನೆಯ ಸಿದ್ದತೆಗಳನ್ನು ನೆರವೇರಿಸುತ್ತವೆ.

ಇದರೊಂದಿಗಿರುವ (ಮುಂದಿನ ಎರಡು ಪುಟಗಳಲ್ಲಿರುವ) ರೇಖಾಚಿತ್ರಗಳ ಜಾಗರೂಕ ಅಧ್ಯಯನವು ಸುಗ್ಗಿ ಮತ್ತು ಕರ್ತನ ಪ್ರತ್ಯಕ್ಷತೆ ಮತ್ತು ಆತನ ರಾಜ್ಯದ ಸ್ಥಾಪನೆಗೆ ಸಂಬಂಧಿಸಿದ ಸಂಗತಿಗಳ ಕಾಲ–ಪ್ರವಾದನೆಯ ಮೇಲೆ ಕೇಂದ್ರೀಕೃತಗೊಂಡು ಮನಸ್ಸಿನ ಮೇಲೆ ಪ್ರಭಾವಬೀರುತ್ತವೆ. ಅವುಗಳಲ್ಲಿ ಒಂದು ಸುವಾರ್ತಾಯುಗ ಮತ್ತು ಅದರ ಸಾಂಕೇತಿಕ ಯೆಹೂದ್ಯ ಯುಗ ಇವುಗಳ ನಡುವಣ ಸಮಾನಾಂತರಗಳನ್ನು ಮತ್ತು ಅನುರೂಪತೆಗಳನ್ನು ಮತ್ತು ಸುಗ್ಗಿಯಲ್ಲಿನ ವಿವಿಧ ಪ್ರಮುಖ ಲಕ್ಷಣಗಳು ಮಹಾ ಪ್ರವಾದನೆಗಳಲ್ಲಿ ಯಾವ ರೀತಿಯಲ್ಲಿ ಗುರುತಿಸಲ್ಪಟ್ಟಿವೆ ಎಂಬುದನ್ನು ತೋರಿಸುತ್ತದೆ. ಅದೇ ಸಮಯದಲ್ಲಿ ಮತ್ತೊಂದು ಸಂಕ್ಷಿಪ್ತವಾಗಿ ದೇವರ ಸಾಂಕೇತಿಕ ಮತ್ತು ನೈಜ ಸಭೆಗಳಿಗೆ (ಯೆಹೂದಿ ಮಂದಿರ ಮತ್ತು ಸುವಾರ್ತೆ) ಸಂಬಂಧಿಸಿದ ಇತಿಹಾಸವನ್ನು ತೋರಿಸುತ್ತದೆ ಮತ್ತು ಅದಕ್ಕೆ ಸಂಬಂಧಿಸಿದ ಪ್ರವಾದನೀಯ ಪರಿಮಾಣಗಳನ್ನು ತೋರಿಸುತ್ತದೆ.

ಈ ರೀತಿಯಲ್ಲಿ 'ಅಂತ್ಯಕಾಲ'ದಲ್ಲಿ ಒಮ್ಮುಖ ವಾಗುವ ಎಲ್ಲಾ ಪ್ರವಾದನೆಗಳ ರೇಖೆಯೂ, ಅದರ ಕೇಂದ್ರ ಬಿಂದುವು 'ಸುಗ್ಗಿಯಾಗಿದ್ದು' – ಅದು ನಮ್ಮ ಕರ್ತನ ಪ್ರತ್ಯಕ್ಷತೆಯ ಮತ್ತು ಆತನು ಬಹಳ ಹಿಂದೆ ವಾಗ್ದಾನಮಾಡಿದ ಆತನ ರಾಜ್ಯದ ಸ್ಥಾಪನೆಯ ಕಾಲವಾಗಿದೆ. ನಾವು ಈ ಘಟನೆಗಳ ಮಹಾ ಪ್ರಾಮುಖ್ಯತೆಯನ್ನು ಪರಿಗಣಿಸುವಾಗ, ಅವು ಪರಿಚಯಿಸುವ ಮತ್ತು ಗುರುತಿಸುವ ಆಶ್ಚರ್ಯಕರವಾದ ವಿತರಣಾ ಬದಲಾವಣೆಗಳು ಮತ್ತು ಪ್ರವಾದನೀಯ ಸಾಕ್ಷ್ಯಗಳ ಮೊತ್ತ ಮತ್ತು ಗುಣಲಕ್ಷಣಗಳು ಕಂಡುಬರುತ್ತವೆ ಮತ್ತು ಆತನ ಪ್ರತ್ಯಕ್ಷತೆಯ ರೀತಿಯನ್ನು, ಆತನ ಪ್ರಸನ್ನತೆಯನ್ನು ಗ್ರಹಿಸುವ ನಮ್ಮ ನಂಬಿಕೆಯಲ್ಲಿ ನಾವು ಮುಗ್ಗರಿಸುವಂತಹ ಯಾವುದೇ ತಡೆಯಿಲ್ಲದ ರೀತಿಯಲ್ಲಿ ಜಾಗರೂಕತೆಯಿಂದ ನಮಗೆ



ಅನ್ಯಜನಗಳವರ ಸಮಯಗಳು – 2520 ವರ್ಷಗಳು
ಬಾಬೆಲೋನ್ ಸಿಂಹ
ಮೇದ್ಯ–ಪಾರಸಿಯ ಕರಡಿ
ಗ್ರೀಸ್ ಚಿರತೆ
ರೋಮ್
ಇಸ್ರಾಯೇಲ್ಯರ ಕಡೇ ಸಾಂಕೇತಿಕ ಜ್ಯೂಬಿಲಿ
70 ವರ್ಷಗಳ ಪಾಳುಬೀಳುವಿಕೆ
70 ವಾರಗಳು – ದಾನಿ. 9:24
2300 ವಾರಗಳು – ದಾನಿ. 8:14
70ನೇ ವಾರದ ಮಧ್ಯಂತರ ಕ್ರಿ.ಶ. 33
ಪೋಪ್ ಅಧಿಕಾರದ ಸ್ಥಾಪನೆ ಕ್ರಿ.ಶ. 539
1260 ದಿನಗಳು
ಕ್ರಿ.ಶ. 1799
1335 ದಿನಗಳು
ಕ್ರಿ.ಶ. 1846
ಕ್ರಿ.ಶ. 1875
ಕ್ರಿ.ಶ. 1914
ಒಂದೇ ಸಭೆ ಅಥವಾ ಪವಿತ್ರ ಮಂದಿರ
ಸಹಸ್ರಮಾನಗಳ ರಾಜ್ಯ

## “ಇಸ್ರಾಯೇಲಿನ ಎರಡೂ ಮನೆತನಗಳು”

––– ಸಮಾನಾಂತರಗಳು –––

**ಯೆಹೂದ್ಯ ಕೃಪಾಕಾಲ, ರಾಜ್ಯಕ್ಕಾಗಿ ಕಾಯುವಿಕೆ**

1845 + 3½ ವರ್ಷಗಳು

ಕ್ರಿ.ಪೂ. 1813

ಕುಲಪತಿಯಾದ ಯಾಕೋಬನ ಮರಣದ ದಿನಾಂಕದಿಂದ
ಮೂಲ ಹೆಸರಾದ ಇಸ್ರಾಯೇಲನೆಂಬ ಯಾಕೋಬನ ಮಕ್ಕಳ
ಇಸ್ರಾಯೇಲ್ ರಾಷ್ಟ್ರದ ಅಸ್ತಿತ್ವದ ಅವಧಿ

ಕ್ರಿ.ಶ. 29

70ನೇ ವಾರ

ಅರಸನ ಬರೋಣವು

ಕ್ರಿ.ಶ. 33

ಕ್ರಿ.ಶ. 36

**ಯೆಹೂದ್ಯ ಸುಗ್ಗಿಕಾಲ**

3½ + 3½ + 33 = 40 ವರ್ಷಗಳು

ಇಸ್ರಾಯೇಲ್ ಪತನ

ರೌದ್ರದ ದಿನಗಳು

ಲೂಕ 21:22

ಮಹಾಸಂಕಟದ ಕಾಲ ಮತ್ತು ಅಂತಿಮವಾದ ಅಪಜಯ

ಕ್ರಿ.ಶ. 69

---

**ಕ್ರೈಸ್ತರ ಕೃಪಾಕಾಲ, ರಾಜ್ಯಕ್ಕಾಗಿ ಕಾಯುವಿಕೆ**

ಯೆಹೂದ್ಯರ ಎರಡರಷ್ಟು ಅವಧಿ, 1845 + 3½ ವರ್ಷಗಳು

ಕ್ರಿ.ಶ. 33

ಕ್ರೈಸ್ತರ ಕೃಪಾಕಾಲ ಮತ್ತು ನಂಬಿಗಸ್ತರಿಗೆ ಉನ್ನತ ಕರೆ
ಮೆಸ್ಸೀಯನ ಮರಣದ ದಿನದಿಂದ ಬ್ಯಾಬಿಲೋನಿನ
ಪರಿತ್ಯಜಿಸುವಿಕೆ ಹಾಗೂ ಪತನದವರೆಗಿನ ಅವಧಿ

ಕ್ರಿ.ಶ. 1874

ಅರಸನ ಬರೋಣವು

ಕ್ರಿ.ಶ. 1878

ಕ್ರಿ.ಶ. 1881

**ಕ್ರೈಸ್ತ ಸುಗ್ಗಿಕಾಲ**

3½ + 3½ + 33 = 40 ವರ್ಷಗಳು

ಬಾಬಿಲೋನ್ ಪತನ

ರೌದ್ರದ ದಿನಗಳು

ದಾನಿ. 12:1

ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸದಂಥ ಸಂಕಟವು ಸಂಭವಿಸುವುದು

ಕ್ರಿ.ಶ. 1914

ಬೋಧಿಸಲಾಗಿದೆ ಎಂಬುದನ್ನು ನಾವು ಕಾಣುತ್ತೇವೆ. ನಮ್ಮ ಹೃದಯಗಳು ಮಾತಾಡಲಾರದಂತೆ ಹರ್ಷಿಸುತ್ತವೆ. ಈ ಮೊದಲು ಇಸ್ರಾಯೇಲ್ಯರ ಸಮಾಧಾನಕ್ಕಾಗಿ ಕಾಯುತ್ತಿದ್ದವರಿಗೆ ಕೊಟ್ಟ ಸಾಕ್ಷ್ಯವು "ನಿಜ ಇಸ್ರಾಯೇಲ್ಯರಿಗೆ" ಸಾಕಷ್ಟು ಎನಿಸಿದರೂ, ಮೊದಲನೆಯ ಆಗಮನದ ಬಗ್ಗೆ ಶಿಷ್ಯರಿಗೆ ನೀಡಿದ ಸಾಕ್ಷ್ಯಗಳಿಗಿಂತ ಪೂರ್ಣವಾಗಿ ಹತ್ತರಷ್ಟು ಸಾಕ್ಷ್ಯಗಳು ಈಗ ಆತನ ದ್ವಿತೀಯಾಗಮನದ ಬಗ್ಗೆ ನೀಡಲಾಗಿದೆ.

ಸುಮಾರು ಎರಡು ಸಾವಿರ ವರ್ಷಗಳವರೆಗೆ, ಕಷ್ಟ ಸಂಕಟಗಳು, ಉಪದ್ರವಗಳನ್ನು ಅನುಭವಿಸಿ ಸ್ವಯಂ ತ್ಯಾಗಮಾಡಿದ ಪ್ರತಿಷ್ಠೆ ಹೊಂದಿದವರು ಪ್ರಭುವಿನ ಆಗಮನಕ್ಕಾಗಿ ತವಕದಿಂದ ಕಾಯುತ್ತಿದ್ದರು. ಪ್ರಾಮಾಣಿಕರಾದ ಪೌಲರು, ಉತ್ಸಾಹಿತರಾದ ಪೀಟರ್‌ಗಳು, ಪ್ರೀತಿಸುವ ಯೋಹಾನರುಗಳು, ನಿಷ್ಠಾವಂತರಾದ ಸ್ತೇಫನರುಗಳು, ಮೃದುತ್ವವುಳ್ಳ ಮೇರಿಯರುಗಳು ಮತ್ತು ಕೋಮಲ ಹಾಗೂ ಉದಾರಿಗಳಾದ ಮಾರ್ಥರುಗಳು, ಚಿತ್ರಹಿಂಸೆ ಮುಂತಾದ ಮರಣಕರ ಗಂಡಾಂತರದ ಸಮಯದಲ್ಲಿಯೂ ಧೈರ್ಯಶಾಲಿಗಳಾಗಿ ಸತ್ಯದ ಅರಿಕೆಮಾಡುವವರ ಉದ್ದದ ಸಾಲುಗಳು, ಸಂಕಷ್ಟಗಳಿಗೆ ಸಿಲುಕಿದ್ದ ಹತಸಾಕ್ಷಿಗಳು, ಮತ್ತು ಇಸ್ರಾಯೇಲಿನಲ್ಲಿ ಉಗ್ರತೆ ಕಡಿಮೆಯಿದ್ದ ಸಮಯದಲ್ಲಿ ದೇವರೊಡನೆ ನಮ್ರವಾಗಿ ನಡೆದುಕೊಂಡ ಕೆಲವು ನಿಷ್ಠಾವಂತ ತಂದೆಯರು, ತಾಯಿಗಳು, ಸಹೋದರ ಸಹೋದರಿಯರು ಕ್ರಿಸ್ತನನ್ನು ಅರಿಕೆಮಾಡುವುದಕ್ಕೆ, ಆತನ ನಿಂದನೆಯನ್ನು ಹೊರಲು, ಆತನ ಸತ್ಯದ ಸಲುವಾಗಿ ನಿಂದನೆಗೊಳ ಗಾದವರ ಸಂಗಾತಿಗಳಾಗಿರಲು ನಾಚಿಕೆಪಡದವರು, ಹೆದರದವರು (ಇಬ್ರಿಯ 10:33) – ಇಂಥವರು ನಂಬಿಕೆಯ ಒಳ್ಳೆಯ ಹೋರಾಟವನ್ನು ಮಾಡಿದ ನಂತರ ತಮ್ಮ ಅಸ್ತ್ರವನ್ನು ಕೆಳಗಿಳಿಸಿ ಕರ್ತನ ಪ್ರತ್ಯಕ್ಷತೆಯಲ್ಲಿ ವಾಗ್ದಾನ ಮಾಡಲ್ಪಟ್ಟ ಬಹುಮಾನಗಳಿಗಾಗಿ ಕಾಯುತ್ತಿರುವರು (2 ತಿಮೋ. 4:8).

ಈಗ ಆತನು ಬಂದಿದ್ದಾನೆ! ಕರ್ತನು ನಿಜವಾಗಿಯೂ ಪ್ರಸ್ತುತಿಗೊಂಡಿದ್ದಾನೆ! ಆತನ ರಾಜ್ಯವನ್ನು ಸ್ಥಾಪಿಸುವ ಮತ್ತು ಆತನ ಪ್ರಾಮಾಣಿಕ ಮದಲಗಿತ್ತಿಯು, ಉನ್ನತಿಹೊಂದುವ, ಮಹಿಮೆಗೊಳ್ಳುವ ಕಾಲವು ಸಮೀಪವಾಗಿದೆ. ಆತನ ಆಗಮನಕ್ಕಾಗಿ ಕಾಯುವ ದಿನಗಳು ಈಗ ಮುಗಿದುಹೋಗಿದೆ, ಆತನನ್ನು ಕಾಯುವವರ ದೈವೀಕೃಪೆಯು, ಬಹಳ ಹಿಂದೆ ಹೇಳಲ್ಪಟ್ಟಿದ್ದು ಈಗ ನಮ್ಮದಾಗಿದೆ. ವಿಶ್ವಾಸದ ಕಣ್ಣಿಗೆ ಆತನು ಈಗ ಪ್ರವಾದನೀಯ ಬೆಳಕಿನಲ್ಲಿ ಪ್ರಕಟಗೊಂಡಿದ್ದಾನೆ (2 ಪೇತ್ರ 1:19), ಇದಕ್ಕೆ ಮೊದಲು ಸುಗ್ಗಿಯೂ ಸಂಪೂರ್ಣವಾಗಿ ಮುಗಿದುಹೋಗಿದೆ*, ನಂಬಿಕೆ ಮತ್ತು ನಂಬಿಕೆಯ ಪ್ರಸ್ತುತ ಸಂತೋಷದ ಸ್ಥಳವನ್ನು ನಮ್ಮ ನಿರೀಕ್ಷೆಯ ಪೂರ್ಣ ಫಲವಾಗಿರುವ ಅತ್ಯಾನಂದಕರ ಸಂತೋಷಗಳು ಆಕ್ರಮಿಸಿಕೊಳ್ಳುತ್ತವೆ. ಆಗ ಅರ್ಹರಾಗಿ ಎಣಿಸಲ್ಪಟ್ಟ ಇವರುಗಳೆಲ್ಲರೂ ಆತನಂತೆ ಮಾಡಲ್ಪಡುವರು ಮತ್ತು ಆತನನ್ನು, ಆತನಿರುವಂತೆಯೇ ನೋಡುವರು.

ಅದನ್ನು ಉದಾಹರಿಸುವ ಸಾಮ್ಯದಲ್ಲಿ ತೋರಿಸಿರುವಂತೆ (ಮತ್ತಾಯ 25: 14–30), ಕರ್ತನ ಹಿಂದಿರುಗುವಿಕೆಯಲ್ಲಿ ಮಾಡಲ್ಪಟ್ಟ ಮೊದಲ ಸಂಗತಿಯೆಂದರೆ, ಆತನ ಸೇವಕರನ್ನು ಕರೆಯುವುದು ಮತ್ತು ಅವರೊಂದಿಗೆ ಎಣಿಕೆಹಾಕುವುದು. ತಮ್ಮ ತಲಾಂತುಗಳನ್ನು ಪ್ರಾಮಾಣಿಕವಾಗಿ ಉಪಯೋಗಿಸಿದ ಸೇವಕರನ್ನು ಲೆಕ್ಕಮಾಡುವುದರಲ್ಲಿ, ಆತನ ಚಿತ್ತವನ್ನು ಬಯಸಿ, ಅದನ್ನು ಪಾಲಿಸುವವರ ಬಗ್ಗೆ ಸಾಮ್ಯವು ತೋರಿಸುವುದೇನೆಂದರೆ ಪ್ರತಿಯೊಬ್ಬರನ್ನೂ, ಪರೀಕ್ಷೆ ಹೊಂದಿದ ಕೂಡಲೇ, ಅವರು ವಾಗ್ದತ್ತ ರಾಜ್ಯವನ್ನು ಪಡೆಯುವ ಮೊದಲೇ 'ಕರ್ತನ ಸೌಭಾಗ್ಯ'ದಲ್ಲಿ ಸೇರುವಂತೆ ಮಾಡಲಾಯಿತು. ಈ ಸಾಮ್ಯವು ಆಳ್ವಿಕೆಯಲ್ಲಿ ನಮ್ಮ ಪಾಲು ಪ್ರಾರಂಭವಾಗುವ ಮುನ್ನವೇ ನೆರವೇರುವುದನ್ನು ನಾವು ನೋಡುತ್ತೇವೆ. ಶತ್ರುಗಳನ್ನು ಗೆಲ್ಲುವ ಮೊದಲೇ, ಪ್ರತಿಯೊಬ್ಬ ನಂಬಿಗಸ್ತನೂ ಬರಲಿರುವ ರಾಜ್ಯದ ಸ್ಪಷ್ಟ ದೃಶ್ಯವನ್ನು, ವೈಭವವನ್ನು ಉದಯವಾಗುವ ಸಹಸ್ರಮಾನದ ಮಹಾ ಕಾರ್ಯವನ್ನು ನೋಡುವಂತೆ ಅನುಮತಿಸಲ್ಪಡುತ್ತಾನೆ; ಮಹಾ ಪುನರ್‌ವಶದ ಈ ಆಶಯವು ಬೇಗನೆ ಎಲ್ಲಾ ಮಾನವಜಾತಿಯವರಿಗೂ ಕರ್ತನ ಮತ್ತು ಆತನ ಮಹಿಮೆಯುಳ್ಳ ಸಭೆಯ ಸಾಧನತೆಯ ಮೂಲಕ ನೆರವೇರುವುದು ಕರ್ತನ ಸಂತೋಷವಾಗಿದೆ ಮತ್ತು ಅದರಲ್ಲಿ ಭಾಗವಹಿಸುವಂತೆ ಅವರನ್ನು ಅನುಮತಿಸಲಾಗಿದೆ.

ನಾವು ಈ ರೀತಿಯಲ್ಲಿ ಪಿಸ್ಗಾ ಪರ್ವತ ಶ್ರೇಣಿಯ ಎತ್ತರದಲ್ಲಿ ನಮ್ಮ ಮುಂದೆ ಇರುವ ಭವ್ಯವಾದ ಪ್ರತೀಕ್ಷೆಯನ್ನು ದೃಷ್ಟಿಸುವಂತೆ ನಿಂತುಕೊಂಡಿರುವಾಗ, ನಮ್ಮ ಹೃದಯವು ಕರ್ತನ ಮಹಾ ಯೋಜನೆಯ ಬಗ್ಗೆ ಹೇಳಲಾಗದ ಸಂತೋಷದಿಂದ ಉಲ್ಲಾಸಿಸುತ್ತದೆ. ಸಭೆಯು ಆಕೆಯ ಅಪಮಾನ ಹೊಂದುವಿಕೆಯ ನಿರರ್ಥಕತೆಯಲ್ಲಿ ಇನ್ನೂ ಅಲೆದಾಡುತ್ತಿರುವಾಗ, ಆಕೆಯ

* ಸುಗ್ಗಿಯ ಅಂತ್ಯವು ಬಹುಶಃ ಹಣಜಿಯನ್ನು ಸುಡುವುದನ್ನೂ ಒಳಗೊಂಡಿದೆ

ನಿಜವಾದ ವಿಜಯೋತ್ಸವದ ಸಮಯವು ಇನ್ನೂ ಪೂರ್ಣವಾಗಿ ಬಾರದೇ ಇರುವಾಗಲೂ, ಅದರ ಶೀಘ್ರ ಸಮೀಪಿಸುವಿಕೆಯ ಸೂಚನೆಗಳನ್ನು ನೋಡುತ್ತಾ ಮತ್ತು ನಂಬಿಕೆಯು ಈಗಾಗಲೇ ಮದಲಿಂಗನ ಪ್ರತ್ಯಕ್ಷತೆಯನ್ನು ತಿಳಿದಿದ್ದು, ನಾವು ನಮ್ಮ ತಲೆಗಳನ್ನು ಎತ್ತಿ ನಮ್ಮ ವಿಮೋಚನೆಯು ಹತ್ತಿರವಾಗಿರುವುದಕ್ಕಾಗಿ ಉಲ್ಲಾಸಿಸುತ್ತೇವೆ. ಆಹಾ! ಎಂಥಾಃ ಆಶೀರ್ವಾದದ ಪರಿಪೂರ್ಣತೆ ಮತ್ತು ಸಂತೋಷಕ್ಕೆ ಹಾಗೂ ಕೃತಜ್ಞತಾಸ್ತುತಿಗಳನ್ನು ಸಲ್ಲಿಸಲು ಈ ಸತ್ಯವು ಕಾರಣವಾಗಿದೆ! ನಿಜವಾಗಿಯೂ ಕರ್ತನು ನಮ್ಮ ಬಾಯಿಯಲ್ಲಿ ನೂತನ ಸಂಗೀತವೊಂದನ್ನು ಹಾಕಿದ್ದಾನೆ. ಅದೊಂದು ಭವ್ಯವಾದ ಸ್ತುತಿಗೀತೆಯಾಗಿದೆ, ಇದರ ಮೊದಲನೆಯ ಚರಣವಾದ – ಇಗೋ ಎಲ್ಲಾ ಜನರಿಗೆ ಮಹಾ ಸಂತೋಷವನ್ನುಂಟು ಮಾಡುವ ಶುಭ ಸಮಾಚಾರವನ್ನು ನಾನು ತಂದಿದ್ದೇನೆ" ಎಂಬುದನ್ನು ದೇವದೂತರ ಗಾಯನಮಂಡಲಿಯವರು ಯೇಸು ಕಂದನ ಜನನದಲ್ಲಿ ಹಾಡಿದ್ದರು. "ಕೇಳಿರಿ, ಜನರಿಗೆಲ್ಲಾ ಮಹಾ ಸಂತೋಷನ್ನುಂಟು ಮಾಡುವ ಶುಭಸಮಾಚಾರವನ್ನು ನಿಮಗೆ ತಿಳಿಸುತ್ತೇನೆ". ದೇವರಿಗೆ ಸ್ತೋತ್ರವಾಗಲಿ! ಅದರ ಸಾಮರಸ್ಯಕರ ದಣಿವುಗಳುಗಳು ಇನ್ನುಮುಂದೆ ಪರಲೋಕ ಭೂಲೋಕಗಳನ್ನು ರಕ್ಷಣೆಯ ಆಶೀರ್ವದಿತ ಕಾರ್ಯವಾಗಿ–ಪುನರ್‌ವಶದ–ನಿರಂತರವಾದ ಗಾನಸುಧೆಯಿಂದ ತುಂಬಿಸುತ್ತದೆ. ಅದನ್ನು ಆತನು ಬಂದಾಗ ಅದರ ಭವ್ಯವಾದ ಒಟ್ಟುಗೂಡಿಸುವಿಕೆಯ ಕಡೆಗೆ ಪ್ರಗತಿಪಡಿಸುತ್ತಾನೆ.

(1) Joy to the world! The Lord is come!
Let earth receive her King!
Let every heart prepare him room
And heaven and nature sing.

(2) He'll rule the world with truth and grace.
And make the nation prove
The strictness of his righteousness
And wonders of his love"

==============================

[See notes II and III]

(1) ಭೂಲೋಕವೇ ಉಲ್ಲಾಸಿಸು! ಕರ್ತನು ಆಗಮಿಸುತ್ತಾನೆ !

ಧರೆಯು ತನ್ನ ಅರಸನನ್ನು ಸ್ವೀಕರಿಸಲಿ (ಬರಮಾಡಿಕೊಳ್ಳಲಿ)

ಪ್ರತಿಯೊಬ್ಬರ ಹೃದಯದಲ್ಲಿ ಆತನಿಗೆ ಸ್ಥಳ ಸಿದ್ಧಮಾಡಲಿ

ಮತ್ತು ಪರಲೋಕ ಹಾಗೂ ದೈವಸೃಷ್ಟಿಯು ಹಾಡಿ ಹರಸಲಿ.

(2) ಆತನು ಕೃಪಾಸತ್ಯತೆಯಿಂದ ಜಗತ್ತನ್ನು ಆಳುತ್ತಾನೆ

ಮತ್ತು ರಾಷ್ಟ್ರಗಳನ್ನು ದೃಢಪಡಿಸುತ್ತಾನೆ

ಕಟ್ಟುನಿಟ್ಟಾಗಿ ಆತನ ನೀತಿಯನ್ನು

ಹಾಗೂ ಆತನ ಅದ್ಭುತ ಪ್ರೀತಿಯನ್ನು ಸ್ಥಾಪಿಸುತ್ತಾನೆ.

* * * * * * *